**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕಃ18.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ**
**ಶ್ರೀ .ಎನ್.ಆರ್.ಸಿ. ವಕೀಲರಿಂದಃ**

ಡಿ.ಡಬ್ಲ್ಯೂಃ 2 ನನ್ನ ಸ್ನೇಹಿತರು ಎಂದರೆ ಸರಿ . 2 ನೇ ಪ್ರತಿವಾದಿ ನನ್ನನ್ನು ಸಾಕ್ಷ್ಯ ಹೇಳಲು ಕರೆದುಕೊಂಡು ಬಂದಿರುತ್ತಾರೆ.1 ನೇ ಪ್ರತಿವಾದಿಯ ಹೆಂಡತಿ ನನ್ನ ಅಕ್ಕ. ವಾದಿ ಮತ್ತು ಪ್ರತಿವಾದಿಗಳು ಅವರ ಕುಟುಂಬಕ್ಕೆ ಪಿತ್ರಾರ್ಜಿತ ಆಸ್ತಿಗಳು ಎಷ್ಟು ಮತ್ತು ಖರೀದಿಸಿದ ಆಸ್ತಿಗಳು ಎಷ್ಟು ಎಂದು ನನಗೆ ತಿಳಿಸಿರುವುದಿಲ್ಲ. ನಿ.ಡಿ.1 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ನಿ.ಡಿ.1 ಅನ್ನು ಬರೆಯುವ ಕಾಲಕ್ಕೆ ನಾನು ಹಾಜರಿದ್ದೆ.ನಿ.ಡಿ.1 3 ಪುಟಗಳಿದ್ದು ಅದರ ಪ್ರತಿ ಪುಟಕ್ಕೆ ವಾದಿ , 1 ಮತ್ತು 2 ನೇ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ . ನಿ,ಡಿ.1 ಅನ್ನು ಬರೆಯುವ ಕಾಲಕ್ಕೆ ನಾನು ಹಾಜರಿರಲಿಲ್ಲ 2 ನೇ ಪ್ರತಿವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.1 ರಂತೆ ಸ.ನಂಃ 27 ರಲ್ಲಿ ವಾದಿಗೆ 1 ಎಕರೆ 37 ಗುಂಟೆ 2 ನೇ ಪ್ರತಿವಾದಿಗೆ 1 ಎಕರೆ 37 ಗುಂಟೆ ಮತ್ತು ಅವರ ತಂದೆ ತಾಯಿಯರಿಗೆ 1 ಎಕರೆ 38 ಗುಂಟೆ ವಿಭಾಗವಾಗಿದೆ ಎಂದು ಹೇಳಲಾದ ಜಮೀನುಗಳ ಪ್ರತ್ಯೇಕ ಚಕ್ಕುಬಂದಿಗಳು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು. ದಾವಾಸ್ವತ್ತು 1 ನೇ ಪ್ರತಿವಾದಿಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ .

2. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಚಾರವನ್ನು 2 ನೇ ಪ್ರತಿವಾದಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಚಾರವನ್ನು 2 ನೇ ಪ್ರತಿವಾದಿ ಬರೆಸಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ವಾದಿ ಮತ್ತು ಪ್ರತಿವಾದಿಗಳು ಒಟ್ಟಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೇನು ತಿಳಿಯದೇ ಇದ್ದರೂ 2 ನೇ ಪ್ರತಿವಾದಿಯ ಮಾತಿನ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು **4** ನೇ ಪ್ರತಿವಾದಿ ಪರ ವಕೀಲರಾದ ಶ್ರೀ**.**ಹೆಚ್**.**ಬಿ**.**ಜಿ**.**ರವರಿಂದ ಃ

ಪ್ರಸ್ತುತ ದಾವೆಯ ವಾದಿ ಮತ್ತು ಪ್ರತಿವಾದಿಗಳು ನನಗೆ ಪರಿಚಿತರು. 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿಗೆ ವಾದಿ, 2 ರಿಂದ 4 ನೇ ಪ್ರತಿವಾದಿಗಳು ಮಕ್ಕಳಿರುತ್ತಾರೆ. ಅವರೆಲ್ಲರೂ ಒಟ್ಟು ಕುಟುಂಬದ ಸದಸ್ಯರೆಂದರೆ ಸರಿ. ದಾವಾಸ್ವತ್ತು ಸ.ನಂಃ 27.ಪ್ರಸ್ತುತ ದಾವೆಯನ್ನು ಭಾಗಾಂಶ ಕೋರಿ ವಾದಿ ದಾವೆ ಸಲ್ಲಿಸಿರುತ್ತಾರೆ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿ.ಡಿ.1 ರ ಸ.ನಂಃ 27 ರ 5 ಎಕರೆ 36 ಗುಂಟೆ ಜಮೀನಿಗೆ ಸಂಬಂದಿಸಿದಂತೆ ಪಂಚಾಯಿತಿ ನಡೆಸಿರುತ್ತೇವೆ ಅದಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಿ.ಡಿ.1 ಕ್ಕೆ ನಾನು ಸಹಿ ಮಾಡಿರುವುದಿಲ್ಲ. ನಿ.ಡಿ.1 ಕ್ಕೆ 3 ಮತ್ತು 4 ನೇ ಪ್ರತಿವಾದಿಗಳು ಸಹಿ ಹಾಕಿರುತ್ತಾರೆಯೇ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.1 ದಾಖಲಾತಿಯನ್ನು ಬರೆಯದೇ ಇರುವುದರಿಂದ ಅದಕ್ಕೆ ನಾನಾಗಲೀ, 3 ಮತ್ತು 4 ನೇ ಪ್ರತಿವಾದಿಯಾಗಲೀ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಮತ್ತು ವಾದಿಯ ನಡುವೆ ಯಾವುದೇ ಪಾರಿಕತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ.

2. ದಾವಾಸ್ವತ್ತು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಮೂಲವನ್ನು ನಾನು ಪರಿಶೀಲಿಸಿರುವುದಿಲ್ಲ. ನಿ.ಡಿ.1 ರ ದಿನಾಂಕ ನನಗೆ ಗೊತ್ತಿಲ್ಲ. ನಿ.ಡಿ.1 ರ ಮೇಲೆ ಕಂದಾಯ ದಾಖಲಾತಿಗಳು ಅಂಗೀಕಾರ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**